# ನಮೂನೆ – 6

[13(1) ಮತ್ತು 26ನೇ ನಿಯಮಗಳನ್ನು ನೋಡಿ]

## ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವುದಕ್ಕಾಗಿ ಅರ್ಜಿ

ಇವರಿಗೆ,

ಮತದಾರರ ನೋಂದಣಾಧಿಕಾರಿ,

............................................................ ವಿಧಾನಸಭಾ / ಲೋಕಸಭಾ£ ಕ್ಷೇತ್ರ

ಮಾನ್ಯರೇ,

ಮೇಲಿನ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸಬೇಕೆಂದು ನಾನು ಕೋರಿಕೊಳ್ಳುತ್ತೇನೆ. ಮತದಾರರ ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸುವುದಕ್ಕೆ ಸಂಬಂಧಿಸಿದ ನನ್ನ ಕ್ಲೇಮನ್ನು ಸಮರ್ಥಿಸುವಂಥ ವಿವರಗಳನ್ನು ಕೆಳಗೆ ನೀಡಿರುತ್ತೇನೆ.

ಮುಖದ ಮುಂಭಾಗ ಪೂರ್ಣ ಕಾಣಿಸುವ ಇತ್ತೀಚಿನ ಒಂದು ಪಾಸ್ ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸಲು ಸ್ಥಳ (3.5 ಸೆಂ.ಮೀ. X 3.5 ಸೆಂ.ಮೀ.)

| | | | |
|---|---|---|---|
| **I. ಅರ್ಜಿದಾರನ ವಿವರಗಳು** | ಹೆಸರು: | | ಉಪನಾಮ (ಯಾವುದಾದರೂ ಇದ್ದರೆ): |
| .....................ರ ಜನವರಿ 1ರಂದು ಇದ್ದಂತೆ ವಯಸ್ಸು# | ವರ್ಷಗಳು: | ತಿಂಗಳುಗಳು: | ಲಿಂಗ: (ಪುರುಷ/ಮಹಿಳೆ)* |
| ಜನ್ಮ ದಿನಾಂಕ, ಗೊತ್ತಿದ್ದರೆ: | ದಿನ: | ತಿಂಗಳು: | ವರ್ಷ: |
| ಜನ್ಮ ಸ್ಥಳ: | ಗ್ರಾಮ/ಪಟ್ಟಣ: | | ತಾಲ್ಲೂಕು: |
| | ಜಿಲ್ಲೆ: | | ರಾಜ್ಯ: |
| * ತಂದೆಯ/ತಾಯಿಯ/ಗಂಡನ ಹೆಸರು | ಹೆಸರು: | | ಉಪನಾಮ (ಯಾವುದಾದರೂ ಇದ್ದರೆ): |

**II. ಸಾಮಾನ್ಯ ನಿವಾಸ ಸ್ಥಳದ ವಿವರಗಳು (ಪೂರ್ಣ ವಿಳಾಸ)**

| | |
|---|---|
| ಮನೆ / ಬಾಗಿಲ ಸಂಖ್ಯೆ: | |
| ಬೀದಿ / ಪ್ರದೇಶ / ಮೊಹಲ್ಲಾ / ರಸ್ತೆ: | |
| ಪಟ್ಟಣ / ಗ್ರಾಮ: | |
| | |
| ಅಂಚೆ ಕಚೇರಿ: | ಪಿನ್ ಕೋಡ್ |
| ತಹಸಿಲ್ / ತಾಲ್ಲೂಕು / ಮಂಡಲ / ಠಾಣಾ: | |
| ಜಿಲ್ಲೆ: | |

**III. ಚುನಾವಣಾ ಕ್ಷೇತ್ರದ ಹಾಲಿ ಇರುವ ಮತದಾರರ ಪಟ್ಟಿಯಲ್ಲಿ ಈಗಾಗಲೇ ಸೇರ್ಪಡೆಯಾಗಿರುವ ಅರ್ಜಿದಾರನ ಕುಟುಂಬದ ಸದಸ್ಯನ (ರ) ವಿವರಗಳು**

| ಹೆಸರು | ಅರ್ಜಿದಾರ ರೊಂದಿಗೆ ಸಂಬಂಧ | ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯ ಭಾಗದ ಸಂಖ್ಯೆ | ಆ ಭಾಗದಲ್ಲಿನ ಕ್ರಮ ಸಂಖ್ಯೆ | ಮತದಾರನ ಭಾವಚಿತ್ರವಿರುವ ಗುರುತಿನ ಚೀಟಿ ಸಂಖ್ಯೆ |
|---|---|---|---|---|
| 1. | | | | |
| 2. | | | | |

£ ವಿಧಾನ ಸಭೆ ಇಲ್ಲದಿರುವ ಕೇಂದ್ರಾಡಳಿತ ಪ್ರದೇಶಗಳು ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿಷಯದಲ್ಲಿ.

# ದಯವಿಟ್ಟು ವರ್ಷವನ್ನು ಅಂದರೆ 2007, 2008, ಇತ್ಯಾದಿ ನೀಡಿ.

* ಸಮುಚಿತವಲ್ಲದ ಪರ್ಯಾಯ ಪದವನ್ನು ಹೊಡೆದುಹಾಕಿ.

**IV. ಘೋಷಣೆ**

ನನಗೆ ತಿಳಿದ ಮಟ್ಟಿಗೆ ಮತ್ತು ನಾನು ನಂಬಿರುವ ಮಟ್ಟಿಗೆ ಈ ಕೆಳಕಂಡಂತೆ ಘೋಷಿಸುತ್ತೇನೆ:

(i) ನಾನು ಭಾರತೀಯ ಪೌರನಾಗಿರುತ್ತೇನೆ;

(ii) ನಾನು ಮೇಲೆ ಪ್ಯಾರಾ II ರಲ್ಲಿ ತಿಳಿಸಿರುವ ವಿಳಾಸದಲ್ಲಿ .................... ದಿಂದ (ದಿನಾಂಕ, ತಿಂಗಳು, ವರ್ಷ) ಸಾಮಾನ್ಯ ನಿವಾಸಿಯಾಗಿರುತ್ತೇನೆ;

(iii) ನಾನು ಯಾವುದೇ ಇತರ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನನ್ನ ಹೆಸರನ್ನು ಸೇರಿಸುವಂತೆ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ;

(iv) *ಈ ಅಥವಾ ಯಾವುದೇ ಇತರ ವಿಧಾನ ಸಭಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಸೇರ್ಪಡೆಯಾಗಿರುವುದಿಲ್ಲ.

ಅಥವಾ

*ಕೆಳಗೆ ತಿಳಿಸಿರುವ ವಿಳಾಸದಲ್ಲಿ ಅಂದರೆ .................... ರಾಜ್ಯದ .......................... ಚುನಾವಣಾ ಕ್ಷೇತ್ರದಲ್ಲಿ ಈ ಮುಂಚೆ ನಾನು ಸಾಮಾನ್ಯ ನಿವಾಸಿಯಾಗಿದ್ದೆ. ಆ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನನ್ನ ಹೆಸರು ಸೇರಿಸಿರಬಹುದಾಗಿದೆ. ಹಾಗೆ ಸೇರಿಸಿದ್ದರೆ ಅದನ್ನು ಆ ಮತದಾರರ ಪಟ್ಟಿಯಿಂದ ತೆಗೆದುಹಾಕಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

| | |
|---|---|
| ಪೂರ್ಣ ವಿಳಾಸ (ಮುಂಚಿನ ಸಾಮಾನ್ಯ ನಿವಾಸ ಸ್ಥಳ):<br>____________________<br>____________________<br>____________________<br>____________________ | ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿ (ನೀಡಿದ್ದರೆ)<br>ಸಂಖ್ಯೆ ---------------------------------<br>ಅದನ್ನು ನೀಡಿದ ದಿನಾಂಕ: ----------------------- |

ಸ್ಥಳ :

ದಿನಾಂಕ: ಅರ್ಜಿದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತು.

ಅ) ಸೂಚನೆ: ಸುಳ್ಳು ಮತ್ತು ಸುಳ್ಳೆಂದು ಆತನಿಗೆ ತಿಳಿದಿರುವಂಥ ಅಥವಾ ಆತ ನಂಬಿರುವಂಥ ಅಥವಾ ನಿಜವೆಂದು ನಂಬಲು ಸಾಧ್ಯವಿಲ್ಲದಂಥ ಹೇಳಿಕೆ ನೀಡುವಂಥ ಅಥವಾ ಘೋಷಣೆ ಮಾಡುವಂಥ ಯಾರೇ ವ್ಯಕ್ತಿಯು, ಜನತಾ ಪ್ರಾತಿನಿಧ್ಯ ಅಧಿನಿಯಮ, 1950ರ (1950ರ 43) ಪ್ರಕರಣ 31ರ ಮೇರೆಗೆ ದಂಡನೆಗೆ ಗುರಿಯಾಗುತ್ತಾನೆ.

* ಸಮುಚಿತವಲ್ಲದ ಪರ್ಯಾಯ ಪದ / ಪ್ಯಾರಾವನ್ನು ಹೊಡೆದು ಹಾಕಿ.

**ತೆಗೆದುಕೊಂಡ ಕ್ರಮದ ವಿವರಗಳು**

**(ಚುನಾವಣಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿಯವರು ಭರ್ತಿ ಮಾಡಬೇಕು)**

ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವುದಕ್ಕಾಗಿ ಶ್ರೀ / ಶ್ರೀಮತಿ / ಕುಮಾರಿ ..........................................................

........................... ಇವರು ನಮೂನೆ 6ರಲ್ಲಿ ಸಲ್ಲಿಸಿರುವ ಅರ್ಜಿಯನ್ನು ಅಂಗೀಕರಿಸಲಾಗಿದೆ* / ತಿರಸ್ಕರಿಸಲಾಗಿದೆ*.

*ಅಂಗೀಕರಿಸಿರುವುದಕ್ಕೆ [ನಿಯಮ 18*/20*/26*(4)£ ರ ಅಡಿಯಲ್ಲಿ ಅಥವಾ ಅನುಸಾರವಾಗಿ] ಅಥವಾ

*ತಿರಸ್ಕರಿಸಿರುವುದಕ್ಕೆ [*ನಿಯಮ 17*/20*/26(4)£ರ ಅಡಿಯಲ್ಲಿ ಅಥವಾ ಅನುಸಾರವಾಗಿ] ವಿವರವಾದ ಕಾರಣಗಳು.

| | | |
|---|---|---|
| ಸ್ಥಳ: | ಮತದಾರರ | ಮತದಾರರ ನೋಂದಣಾಧಿಕಾರಿಯವರ |
| ದಿನಾಂಕ: | ನೋಂದಣಾಧಿಕಾರಿಯವರ ಸಹಿ | ಮೊಹರು |

£ ಮತದಾರರ ಪಟ್ಟಿ ಅಂತಿಮವಾಗಿ ಪ್ರಕಟವಾದ ನಂತರ ಅದನ್ನು ನಿರಂತರವಾಗಿ ತಹಲ್‌ವರೆಗೆ ಪರಿಷ್ಕರಿಸುವ ಅವಧಿಯಲ್ಲಿ.

* ಸಮುಚಿತವಲ್ಲದ ಪರ್ಯಾಯ ಪದವನ್ನು ಹೊಡೆದುಹಾಕಿ.

---

ಕ್ಷೇತ್ರ ಮಟ್ಟದ ಅಧಿಕಾರಿಗಳ ಷರಾ (ಉದಾ: ಮತಗಟ್ಟೆ ಮಟ್ಟದ ಅಧಿಕಾರಿ, ನಿಯೋಜಿತ ಅಧಿಕಾರಿ, ಮೇಲ್ವಿಚಾರಣೆ ಅಧಿಕಾರಿ)

...3

## ಅರ್ಜಿಯ ಸ್ವೀಕೃತಿ

** ಶ್ರೀ/ಶ್ರೀಮತಿ/ಕುಮಾರಿ ..........................................................................................

** ವಿಳಾಸ ..........................................................................................

.......................................................... ಇವರು ನಮೂನೆ 6ರಲ್ಲಿ ಸಲ್ಲಿಸಿರುವ ಅರ್ಜಿಯನ್ನು ಸ್ವೀಕರಿಸಲಾಗಿದೆ.

ದಿನಾಂಕ: ....................

ಮತದಾರರ ನೋಂದಣಾಧಿಕಾರಿಯವರ ಪರವಾಗಿ

ಅರ್ಜಿ ಸ್ವೀಕರಿಸುವ ಅಧಿಕಾರಿಯ ಸಹಿ.

(ವಿಳಾಸ):..........................................................

..........................................................

** ಅರ್ಜಿದಾರರೇ ತುಂಬಬೇಕು.

---

## ಅರ್ಜಿ ನಮೂನೆ – 6ನ್ನು ಭರ್ತಿ ಮಾಡಲು ಮಾರ್ಗದರ್ಶನ

### ಸಾಮಾನ್ಯ ಸೂಚನೆಗಳು

**ನಮೂನೆ – 6ನ್ನು ಯಾರು ಸಲ್ಲಿಸಬಹುದು**

1. ಮತದಾರರ ಪಟ್ಟಿಯನ್ನು ಪರಿಷ್ಕರಿಸುವುದಕ್ಕೆ ಸಂಬಂಧಿಸಿದ ವರ್ಷದ ಜನವರಿ ತಿಂಗಳ ಮೊದಲನೇ ದಿನಾಂಕದಂದು 18 ವರ್ಷ ಅಥವಾ ಹೆಚ್ಚು ವಯಸ್ಸು ಹೊಂದುವ ಮೊದಲ ಬಾರಿಯ ಅರ್ಜಿದಾರರು.
2. ಅವನು/ಅವಳು ಈಗಾಗಲೇ ನೋಂದಾಯಿಸಿರುವ ಕ್ಷೇತ್ರದಿಂದ ಮತ್ತೊಂದು ಮತಕ್ಷೇತ್ರಕ್ಕೆ ಅವನ/ಅವಳ ಸಾಮಾನ್ಯ ವಾಸಸ್ಥಳವನ್ನು ಸ್ಥಳಾಂತರಿಸುವ ವ್ಯಕ್ತಿ.

**ನಮೂನೆ – 6ನ್ನು ಯಾವಾಗ ಸಲ್ಲಿಸಬಹುದು**

1. ಕ್ಷೇತ್ರದ ಮತದಾರ ಪಟ್ಟಿಯ ಕರಡನ್ನು ಪ್ರಕಟಿಸಿದ ನಂತರ ಅರ್ಜಿಯನ್ನು ಸಲ್ಲಿಸಬಹುದು. ಅರ್ಜಿಯನ್ನು ಆ ಉದ್ದೇಶಕ್ಕಾಗಿ ನೀಡಿರುವ ನಿರ್ದಿಷ್ಟ ದಿನಾಂಕದೊಳಗಾಗಿ ಸಲ್ಲಿಸಬೇಕು. ಪರಿಷ್ಕರಣಾ ಕಾರ್ಯಕ್ರಮವನ್ನು ಪ್ರಕಟಿಸಿದಾಗ ಮೇಲಿನ ಅವಧಿಯ ಬಗ್ಗೆ ಸಾಕಷ್ಟು ಪ್ರಚಾರ ನೀಡಲಾಗುತ್ತದೆ.
2. ಅರ್ಜಿಯ ಒಂದೇ ಒಂದು ಪ್ರತಿಯನ್ನು ಮಾತ್ರ ಸಲ್ಲಿಸಬೇಕು.
3. ಹೆಸರಿನ ಸೇರ್ಪಡೆಗಾಗಿ ಅರ್ಜಿಯನ್ನು ವರ್ಷಪೂರ್ತಿ, ಪರಿಷ್ಕರಣೆ ಕಾರ್ಯಕ್ರಮ ನಡೆಯದಿರುವ ಸಂದರ್ಭದಲ್ಲೂ ಕೂಡ ಸಲ್ಲಿಸಬಹುದು. ಪರಿಷ್ಕರಣೆ ಕಾರ್ಯಕ್ರಮ ಇಲ್ಲದ ಅವಧಿಯಲ್ಲಿ ಅರ್ಜಿಯನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

**ನಮೂನೆ – 6ನ್ನು ಎಲ್ಲಿ ಸಲ್ಲಿಸಬೇಕು**

1. ಮತದಾರರ ಪಟ್ಟಿ ಪರಿಷ್ಕರಣೆಯ ಅವಧಿಯಲ್ಲಿ, ಮತದಾರರ ಕರಡು ಪಟ್ಟಿ ಪ್ರಕಟಿಸಿರುವ ಗೊತ್ತುಪಡಿಸಿದ ಸ್ಥಳಗಳಲ್ಲಿ [ಸಾಮಾನ್ಯವಾಗಿ ಮತದಾನ ಕೇಂದ್ರದ ಸ್ಥಳಗಳಲ್ಲಿ] ಅಲ್ಲದೇ ಆಯಾ ಮತಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿ ಮತ್ತು ಸಹಾಯಕ ಮತದಾರರ ನೋಂದಣಿ ಅಧಿಕಾರಿಯವರಿಗೆ ಸಲ್ಲಿಸಬೇಕು.
2. ಮತದಾರರ ಪಟ್ಟಿ ಪರಿಷ್ಕರಣೆಯ ಕಾರ್ಯಕ್ರಮ ನಡೆಯದಿರುವ ಅವಧಿಯಲ್ಲಿ ಅರ್ಜಿಯನ್ನು ಕೇವಲ ಮತದಾರರ ನೋಂದಣಿ ಅಧಿಕಾರಿಯವರಲ್ಲಿ ಮಾತ್ರ ಸಲ್ಲಿಸಬೇಕು.

**ನಮೂನೆ – 6ನ್ನು ಭರ್ತಿ ಮಾಡುವುದು ಹೇಗೆ**

1. ಯಾವ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಬೇಕೋ ಆ ಮತಕ್ಷೇತ್ರದ ಮತದಾರರ ನೋಂದಣಿ ಅಧಿಕಾರಿಯ ವಿಳಾಸವನ್ನು ಅರ್ಜಿಯಲ್ಲಿ ಬರೆಯತಕ್ಕದ್ದು. ಮತಕ್ಷೇತ್ರದ ಹೆಸರನ್ನು ಖಾಲಿ ಇರುವ ಜಾಗದಲ್ಲಿ ನಮೂದಿಸಬೇಕು.

2. ಹೆಸರು [ದಾಖಲಾತಿಯ ಆಧಾರದೊಂದಿಗೆ]:

   ಮತದಾರರ ಪಟ್ಟಿಯಲ್ಲಿ ಮತ್ತು ಮತದಾರರ ಭಾವಚಿತ್ರ ಗುರುತಿನ ಚೀಟಿಯಲ್ಲಿ (EPIC) ಯಾವ ರೀತಿ ಇರಬೇಕೋ ಆ ರೀತಿಯಲ್ಲಿ ಹೆಸರನ್ನು ನೀಡತಕ್ಕದ್ದು. ಉಪನಾಮ/ಅಡ್ಡ ಹೆಸರು ಹೊರತುಪಡಿಸಿ ಪೂರ್ಣ ಹೆಸರನ್ನು ಮೊದಲನೇ ಅಂಕಣದಲ್ಲಿ ಬರೆಯತಕ್ಕದ್ದು ಹಾಗೂ ಉಪನಾಮ/ಅಡ್ಡ ಹೆಸರು ಇದ್ದಲ್ಲಿ ಎರಡನೇ ಅಂಕಣದಲ್ಲಿ ಬರೆಯತಕ್ಕದ್ದು. ಮತದಾರರ ಹೆಸರು ಅಥವಾ ಉಪನಾಮದ ಒಂದು ಭಾಗವಾಗಿ ಜಾತಿ ಹೆಸರನ್ನು ಬಳಸಿರದ ಹೊರತು ಜಾತಿಯನ್ನು ನಮೂದಿಸತಕ್ಕದ್ದಲ್ಲ. ಶ್ರೀ / ಶ್ರೀಮತಿ / ಕುಮಾರಿ / ಖಾನ್ / ಬೇಗಂ / ಪಂಡಿತ್ ಮುಂತಾದ ಗೌರವ ಸೂಚಕ ರೂಢನಾಮಗಳನ್ನು ನಮೂದಿಸತಕ್ಕದ್ದಲ್ಲ.

3. ವಯಸ್ಸು [ದಾಖಲಾತಿಯ ಆಧಾರದೊಂದಿಗೆ]:

   ಮತದಾರರ ಪಟ್ಟಿಯನ್ನು ಪರಿಷ್ಕರಿಸುವುದಕ್ಕೆ ಸಂಬಂಧಿಸಿದ ವರ್ಷದ ಜನವರಿ 1ನೇ ದಿನಾಂಕದಂದು ಅರ್ಜಿದಾರರ ವಯಸ್ಸು ಹದಿನೆಂಟು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳಾಗಿರತಕ್ಕದ್ದು. ವಯಸ್ಸನ್ನು ವರ್ಷಗಳು ಹಾಗೂ ತಿಂಗಳುಗಳಲ್ಲಿ ಸೂಚಿಸತಕ್ಕದ್ದು.

   ಉದಾ: 1–1–2009ಕ್ಕೆ ಸಂಬಂಧಿಸಿದಂತೆ ಪರಿಷ್ಕರಿಸಲಾಗುವ ಮತದಾರರ ಪಟ್ಟಿಯಲ್ಲಿ 1–1–1991ರಂದು ಅಥವಾ ಅದರೆಗೆ ಜನಿಸಿರುವ ವ್ಯಕ್ತಿಯು ಸೇರ್ಪಡೆಗೆ ಅರ್ಹರಾಗಿರುತ್ತಾರೆ. ದಿನಾಂಕ: 2–1–1991 ರಂದು ಅಥವಾ ಅನಂತರ ದಿನಾಂಕ: 1–1–1992ರವರೆಗೆ ಜನಿಸುವ ವ್ಯಕ್ತಿಗಳು ದಿನಾಂಕ: 1–1–2010ಕ್ಕೆ ಸಂಬಂಧಿಸಿದಂತೆ ಮುಂದಿನ ಪರಿಷ್ಕರಣೆಯ ಅವಧಿಯಲ್ಲಿ ಸೇರ್ಪಡೆಗೆ ಅರ್ಹರಾಗಿರತಕ್ಕದ್ದು.

4. ಲಿಂಗ:

ಒದಗಿಸಲಾಗಿರುವ ಜಾಗದಲ್ಲಿ ನಿಮ್ಮ ಲಿಂಗವನ್ನು ಪೂರ್ಣವಾಗಿ ಬರೆಯಿರಿ. ಉದಾ: ಗಂಡಸು/ ಹೆಂಗಸು. ಗಂಡಸು ಅಥವಾ ಹೆಂಗಸು ಎಂದು ತಿಳಿಸಲು ಇಚ್ಛಿಸದ ಅರ್ಜಿದಾರರು ಅವರ ಲಿಂಗವನ್ನು "ಇತರೆ" ಎಂದು ನಮೂದಿಸಬಹುದು.

5. ಜನ್ಮ ದಿನಾಂಕ [ದಾಖಲಾತಿಯ ಆಧಾರದೊಂದಿಗೆ]:

ದಿನ/ ತಿಂಗಳು/ ವರ್ಷ ಅಂಕಣದಲ್ಲಿ ಒದಗಿಸಿರುವ ಜಾಗದಲ್ಲಿ ಜನನ ದಿನಾಂಕವನ್ನು ಅಂಕಿಗಳಲ್ಲಿ ಭರ್ತಿ ಮಾಡಿರಿ.
ಜನನ ದಿನಾಂಕದ ರುಜುವಾತಾಗಿ ಲಗತ್ತಿಸಬೇಕಾದವುಗಳು ಈ ಕೆಳಗಿನಂತಿವೆ.

1. ಪುರಸಭೆ ಪ್ರಾಧಿಕಾರಗಳು ಅಥವಾ ಜನನ ಮತ್ತು ಮರಣಗಳ ರಿಜಿಸ್ಟ್ರಾರ್‌ರ ಜಿಲ್ಲಾ ಕಛೇರಿಯಿಂದ ನೀಡಲಾದ ಜನನ ಪ್ರಮಾಣ ಪತ್ರ ಅಥವಾ ನಾಮಕರಣ ಪ್ರಮಾಣ ಪತ್ರ ಅಥವಾ
2. ಅರ್ಜಿದಾರರು ಕಡೆಯದಾಗಿ ಹಾಜರಾದ ಶಾಲೆಯಿಂದ [ಸರ್ಕಾರಿ / ಅಂಗೀಕೃತ] ಅಥವಾ ಇತರ ಯಾವುದೇ ಅಂಗೀಕೃತ ಶೈಕ್ಷಣಿಕ ಸಂಸ್ಥೆಯಿಂದ ನೀಡಲಾದ ಜನನ ಪ್ರಮಾಣ ಪತ್ರ ಅಥವಾ
3. ಮೇಲಿನ ಯಾವುದೇ ದಸ್ತಾವೇಜುಗಳನ್ನು ಹೊಂದಿರದ ಅನಕ್ಷರಸ್ಥ ಅಥವಾ ಅರೆ ಅನಕ್ಷರಸ್ಥ ಅರ್ಜಿದಾರರು, ಅರ್ಜಿದಾರರ ವಯಸ್ಸಿನ ಬೆಂಬಲವಾಗಿ ಈಗಾಗಲೇ ಮತದಾರರ ಪಟ್ಟಿಯಲ್ಲಿ ಸೇರಿಸಲ್ಪಟ್ಟಿರುವ ತಂದೆ/ತಾಯಿ ಇವರಲ್ಲಿ ಯಾರಾದರೊಬ್ಬರಿಂದ ಗೊತ್ತುಪಡಿಸಿದ ನಮೂನೆಯಲ್ಲಿ ಒಂದು ಘೋಷಣೆಯನ್ನು ಲಗತ್ತಿಸುವುದು ಅಗತ್ಯ. ನಮೂನೆಯನ್ನು ಕೋರಿಕೆಯ ಮೇರೆಗೆ ಸರಬರಾಜು ಮಾಡಲಾಗುವುದು.

**ಸೂಚನೆ:** ದಿನಾಂಕ: 26-1-1989 ರಂದು ಅಥವಾ ಅನಂತರ ಜನಿಸಿದ ಅರ್ಜಿದಾರರ ಪ್ರಕರಣದಲ್ಲಿ ಪುರಸಭಾ ಪ್ರಾಧಿಕಾರಗಳು ಅಥವಾ ಜನನ ಮತ್ತು ಮರಣಗಳ ರಿಜಿಸ್ಟ್ರಾರ್‌ರ ಜಿಲ್ಲಾ ಕಛೇರಿಯಿಂದ ನೀಡಲಾದ ಜನನ ಪ್ರಮಾಣ ಪತ್ರವನ್ನು ಮಾತ್ರ ಅಂಗೀಕರಿಸಲಾಗುವುದು.

6. ಜನ್ಮ ಸ್ಥಳ:

ಭಾರತದಲ್ಲಿ ಜನಿಸಿದಲ್ಲಿ ಗ್ರಾಮ / ನಗರ / ಜಿಲ್ಲೆ / ರಾಜ್ಯದ ಹೆಸರನ್ನು ದಯವಿಟ್ಟು ನಮೂದಿಸಿ.

7. ಸಂಬಂಧಿಗಳ ಹೆಸರು:

ಅವಿವಾಹಿತ ಮಹಿಳಾ ಅರ್ಜಿದಾರರ ಸಂಬಂಧದಲ್ಲಿ ತಂದೆ / ತಾಯಿಯ ಹೆಸರನ್ನು ನಮೂದಿಸಬೇಕಾಗುತ್ತದೆ. ವಿವಾಹಿತ ಮಹಿಳಾ ಅರ್ಜಿದಾರರ ಸಂಬಂಧದಲ್ಲಿ ಅವಳ ಪತಿಯ ಹೆಸರನ್ನು ನಮೂದಿಸಬೇಕಾಗುತ್ತದೆ. ಅಂಕಣದಲ್ಲಿರುವ ಅನ್ವಯವಾಗದ ಪಟ್ಟಿಕೆಗಳನ್ನು ಹೊಡೆದು ಹಾಕಿ.

8. ಸಾಮಾನ್ಯವಾಗಿ ವಾಸಿಸುವ ಸ್ಥಳ:

ಒದಗಿಸಿರುವ ಜಾಗದಲ್ಲಿ ನೀವು ಸಾಮಾನ್ಯವಾಗಿ ವಾಸವಾಗಿರುವ ಹಾಗೂ ನೋಂದಾಯಿಸಿಕೊಳ್ಳಲು ಬಯಸುವ ಸ್ಥಳವನ್ನು ಪೂರ್ಣ ಅಂಚೆ ವಿಳಾಸದೊಂದಿಗೆ [ಪಿನ್ ಕೋಡ್ ಸೇರಿಸಿ] ಭರ್ತಿ ಮಾಡಿ.
ಸಾಮಾನ್ಯ ವಾಸ ಸ್ಥಳದ ರುಜುವಾತಾಗಿ ಲಗತ್ತಿಸಬೇಕಾದವು ಈ ಕೆಳಗಿನಂತಿರುತ್ತವೆ:

(1) ಬ್ಯಾಂಕ್ / ಕಿಸಾನ್ / ಅಂಚೆ ಕಛೇರಿ ಚಾಲ್ತಿ ಪಾಸ್ ಪುಸ್ತಕ ಅಥವಾ
(2) ಅರ್ಜಿದಾರರ ಪಡಿತರ ಚೀಟಿ / ಪಾಸ್‌ಪೋರ್ಟ್ / ಡ್ರೈವಿಂಗ್ ಲೈಸೆನ್ಸ್ / ಆದಾಯ ತೆರಿಗೆ ನಿರ್ಧಾರಣೆ ಆದೇಶ ಅಥವಾ
(3) ಅರ್ಜಿದಾರರ ಹೆಸರಿನಲ್ಲಾಗಲೀ ಅಥವಾ ಅತನ / ಆಕೆಯ ನಿಕಟ ಸಂಬಂಧಿಗಳು ಅಂದರೆ ತಂದೆ ತಾಯಿ ಇತ್ಯಾದಿಯವರ ಹೆಸರಿನಲ್ಲಿ ಆ ವಿಳಾಸದಲ್ಲಿ ಬರುವ ಇತ್ತೀಚಿನ ನೀರಿನ / ದೂರವಾಣಿಯ / ವಿದ್ಯುಚ್ಛಕ್ತಿ / ಗ್ಯಾಸ್ ಸಂಪರ್ಕದ ಬಿಲ್ ಅಥವಾ
(4) ನೀಡಲಾಗಿರುವ ವಿಳಾಸದಲ್ಲಿ ಅರ್ಜಿದಾರರ ಹೆಸರಿನಲ್ಲಿ ಅಂಚೆ ಇಲಾಖೆಯಿಂದ ಸ್ವೀಕರಿಸಲಾಗಿರುವ / ಬಟವಾಡೆಯಾಗಿರುವ ಪತ್ರ/ಲಕೋಟೆ.

**ಸೂಚನೆ:** ಯಾರೇ ಅರ್ಜಿದಾರರು ವಿಳಾಸದ ರುಜುವಾತಾಗಿ ಪಡಿತರ ಚೀಟಿಯನ್ನು ಮಾತ್ರ ಸಲ್ಲಿಸಿದಲ್ಲಿ ಅದರೊಂದಿಗೆ ಮೇಲಿನ ಪ್ರವರ್ಗಗಳ ಯಾವುದಾದರೂ ಮತ್ತೊಂದು ರುಜುವಾತು ಲಗತ್ತಿಸಬೇಕು.

9. ಮತದಾರರ ಪಟ್ಟಿಯಲ್ಲಿ ಈಗಾಗಲೇ ಸೇರ್ಪಡೆಯಾಗಿರುವ ಕುಟುಂಬದ ಸದಸ್ಯರ ವಿವರಗಳು:

ಕ್ಷೇತ್ರದ ಚಾಲ್ತಿ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಕುಟುಂಬದ ನಿಕಟ ಸದಸ್ಯರು ಅಂದರೆ ತಂದೆ / ತಾಯಿ / ಸಹೋದರ / ಸಹೋದರಿ / ಗಂಡ / ಹೆಂಡತಿ ಹೆಸರು ಮತ್ತು ಇತರ ವಿವರಗಳನ್ನು ಭರ್ತಿ ಮಾಡಿ. ಇತರ ಸಂಬಂಧಿಗಳು ಅಂದರೆ ಚಿಕ್ಕಪ್ಪ / ಚಿಕ್ಕಮ್ಮ / ದಾಯಾದಿ / ಸಹೋದರ / ಸಹೋದರಿ ಇತ್ಯಾದಿಯವರ ಹೆಸರನ್ನು ನಮೂದಿಸಬಾರದು.

10. ಘೋಷಣೆ:

ಈಗ ಕೊಟ್ಟಿರುವ ವಿಳಾಸದಲ್ಲಿ ಯಾವ ದಿನಾಂಕದಿಂದ ವಾಸಿಸುತ್ತಿದ್ದೀರಿ ಎಂಬುದನ್ನು ದಯವಿಟ್ಟು ಸೂಚಿಸಿ. ನಿಖರವಾದ ದಿನಾಂಕ ಗೊತ್ತಿಲ್ಲದಿದ್ದರೆ ತಿಂಗಳು ಮತ್ತು ವರ್ಷವನ್ನು ಭರ್ತಿ ಮಾಡಿ.
ಇತರ ಯಾವುದೇ ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರನ್ನು ಈಗಾಗಲೇ ಸೇರಿಸಿದಲ್ಲಿ ದಯವಿಟ್ಟು ಪಿನ್‌ಕೋಡ್‌ನೊಂದಿಗೆ ಪೂರ್ಣ ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.
ಚುನಾವಣಾ ಆಯೋಗದಿಂದ ಗುರುತಿನ ಚೀಟಿಯನ್ನು ನೀಡಲಾಗಿದ್ದರೆ ಚೀಟಿ ನಂಬರ್‌ನ್ನು [ಚೀಟಿಯ ಮುಂಭಾಗದಲ್ಲಿ ಮುದ್ರಿಸಿದೆ] ಹಾಗೂ ನೀಡಿದ ದಿನಾಂಕವನ್ನು [ಚೀಟಿಯ ಹಿಂಭಾಗದಲ್ಲಿ ಮುದ್ರಿಸಿದೆ] ಒದಗಿಸಿರುವ ಜಾಗದಲ್ಲಿ ದಯವಿಟ್ಟು ನಮೂದಿಸಿ. ಚೀಟಿಯ ಎರಡೂ ಬದಿಯ ಸ್ವಯಂ ದೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ದಯವಿಟ್ಟು ಲಗತ್ತಿಸಿ.

**ಇತರೆ:**

ಅನೇಕ ಸ್ಥಳಗಳಲ್ಲಿ ಮತದಾರರ ಪಟ್ಟಿಯಲ್ಲಿ ಅವರ ಭಾವಚಿತ್ರವನ್ನು ಸಹ ಮುದ್ರಿಸಲಾಗಿದೆ. ತಮ್ಮ ಇತ್ತೀಚಿನ ಬಣ್ಣದ ಭಾವಚಿತ್ರವನ್ನು ಅರ್ಜಿಯೊಂದಿಗೆ ಸಲ್ಲಿಸಲು ನಿಮಗೆ ಒಂದು ಅವಕಾಶವಿದೆ. ತಮ್ಮ ಭಾವಚಿತ್ರವನ್ನು ಮತದಾರರ ಪಟ್ಟಿಯಲ್ಲಿ ಮುದ್ರಿಸಲು ಮತ್ತು ಅವಶ್ಯವಿದ್ದಲ್ಲಿ ಗುರುತಿನ ಚೀಟಿಯನ್ನು ನೀಡಲು ಬಳಸಿಕೊಳ್ಳಲಾಗುವುದು.

ಕಾ.ಸೂ. ಪ. 35 ಸ.ಪ.ಮು.ಮು.ಮೈ. 10,00,000 ಪ್ರತಿಗಳು ದಿ : 18-06-2010